


### ನವಿರು ಹಾಸ್ಯದ ಸಂಚಿಕೆ

'ಸುಧಾ' ಏ.3ರ ಹಾಸ್ಯ ಸಂಚಿಕೆಯ ಹನಿ, ತುರುವೇಕೆರೆ ಪ್ರಸಾದ್, ಅ.ರಾ.ಸೇ., ವಿ.ಎಂ.ಜೋಶಿ, ಎನ್. ರಾಮನಾಥ್ ಲೇಖನಗಳು ನವಿರು ಹಾಸ್ಯದಿಂದ ಮುದಗೊಳಿಸಿದವು.

-ರಾಜಶೇಖರ ಗೌಡ, ಕೊಟ್ಟೂರು/ ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ/ ಸುಂದರ್, ಕೆ.ಎಂ.ಮಧ್ವರಾಯ, ಬೆಂಗಳೂರು/ ಮುಕುಂದ ಹೆರಕಲ್ಲ, ಗುಲ್ಬರ್ಗ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಎಂ.ಜಿ.ರಾಮಚಂದ್ರ, ಮಂಡಗಳಲೆ/ ಆರ್.ಮಣಿ ಹಾಡ್ಯ, ಮೈಸೂರು

### ಮತ್ತಷ್ಟು ಬೇಕಿತ್ತು

ಹಾಸ್ಯ ಸಂಚಿಕೆಯಲ್ಲಿ ಮತ್ತಷ್ಟು ಹಾಸ್ಯ ಲೇಖನಗಳು ಇದ್ದಿದ್ದರೆ ಪೂರ್ಣ ಅರ್ಥ ಪಡೆದುಕೊಳ್ಳುತ್ತಿತ್ತು.

-ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ

### ಚೆಂದದ ಚಿತ್ರ

ಭಾವು ಪತ್ತಾರರ ಮುಖಪುಟ ಚಿತ್ರ 'ಮೂಷಿಕಲ್ ಛೇ..ರ್' ವಿನ್ಯಾಸದ ಕಲ್ಪನೆ ಅದ್ಭುತವಾಗಿತ್ತು.

-ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ಹೃದಯವಿಹ್ವಲ

'ಸುಟ್ಟಿದ್ದು ಬರಿಯ ಕಾಡಲ್ಲ' ಸುಮಂಗಲಾ ಎಸ್. ಮುಮ್ಮಿಗಟ್ಟಿ ಅವರ ಲೇಖನ ಓದಿ ಹೃದಯ ವಿಹ್ವಲಗೊಂಡಿತು. ಅರಣ್ಯ ಇಲಾಖೆ ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಾದದ್ದು ಆದ್ಯ ಕರ್ತವ್ಯ.

-ಹೇಮಲತಾ ಸುಬ್ರಹ್ಮಣ್ಯ, ಹಾಲ್ಮತ್ತೂರು/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಬಿ.ಎನ್.ಸೊಲ್ಲಾಪುರೆ ಕಮಲನಗರ, ಬೀದರ್

### ಮುದ ನೀಡಿದ ಕಥೆ

ಎಸ್.ಎಸ್.ಮಠಪತಿ ಅವರ ಕಥೆ 'ಬೆಸುಗೆ' ಮನಸ್ಸಿಗೆ ಮುದ ನೀಡಿತು.

ಆರ್.ಮಧುಸೂದನ್, ಹಾಸನ/ ಕೊಹಿಮ, ಬಸರಕೋಡು

### ಬಾಯಲ್ಲಿ ನೀರೂರಿತು

ನಾಗರತ್ನ ಜಿ.ಹೆಗಡೆ ಅವರ 'ಯುಗಾದಿಗೆ ಹಲ್ವಾ' ಬಗೆಬಗೆಯ ರೆಸಿಪಿಗಳು ಬಾಯಲ್ಲಿ ನೀರೂರಿಸಿದವು.

-ಮಧು, ಹಾಸನ

### ವಾಕರಿಕೆ ತಂದ ಸುದ್ದಿ

'ಆಹಾ ಸುದ್ದಿ' ವಿಭಾಗದಲ್ಲಿ ವಿಚಿತ್ರ ಭಕ್ಷ್ಯದ ಕುರಿತ ಚಿತ್ರ ವರದಿ ವಾಕರಿಕೆ ತರಿಸಿತು. ಇಂತಹದ್ದರ ಪ್ರಕಟಣೆ ಬೇಡ ಎನಿಸಿತು.

ಎಚ್.ಕೇಶವಪ್ರಭು, ಶಿವಮೊಗ್ಗ

### ಚೆಂದದ ಮಕ್ಕಳ ಪದ್ಯಗಳು

'ಎಳೆಯರ ಅಂಗಳ'ದಲ್ಲಿ 'ಗುಬ್ಬಿ ಮರಿ' ಕುರಿತು ಪಾರ್ವತಿದೇವಿ ಮತ್ತು ಕಾಳಾಚಾರ್ ಬರೆದ ಪದ್ಯ ಮತ್ತು ಕೆಲವು ವಾರಗಳ ಹಿಂದೆ ಪ್ರಕಟವಾದ 'ಬೇಡ ಪರೀಕ್ಷಾ ಭಯ' ಪದ್ಯಗಳು ಚೆನ್ನಾಗಿದ್ದವು.

ಬಿ.ಸಿದ್ದಲಿಂಗಪ್ಪ, ದಾವಣಗೆರೆ/ ಸುಶಾಂತ ಎಸ್. ಗಬಡಿ, ತೀರ್ಥಹಳ್ಳಿ

## ಕನ್ನಡ ಮಾಧ್ಯಮ- ಮುಂದೇನು?

ಮಾ. 27ರ 'ಸುಧಾ' ಸಂಚಿಕೆಯಲ್ಲಿ ಎ.ಎಂ. ಸುರೇಶರ 'ಕನ್ನಡ ಶಾಲೆಗೆ ಭವಿಷ್ಯ ಇದೆಯೇ?' ಲೇಖನ ಮಹತ್ವದ್ದಾಗಿದೆ. ಕೋಲಾರ ನಗರದಲ್ಲಿ ನನ್ನ ಮಗಳು 7ನೆಯ ತರಗತಿ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿದ್ದಾಳೆ. ಈ ಶಾಲೆಯಲ್ಲಿ ಮುಂದಿನ ವರ್ಷದಿಂದ ಕನ್ನಡ ಮಾಧ್ಯಮ ಇರುವುದಿಲ್ಲವೆಂದು ಆಡಳಿತ ಮಂಡಲಿ ದಾಖಲಾತಿ ಮಾಡಿಕೊಳ್ಳುತ್ತಿಲ್ಲ. 'ಆಂಗ್ಲ ಮಾಧ್ಯಮದಲ್ಲಿ ಮುಂದುವರೆಸಿ, ಇಲ್ಲ– ಬೇರೆ ಶಾಲೆಗೆ ಸೇರಿಸಿ' ಎನ್ನುತ್ತಿದ್ದಾರೆ.

ಇನ್ನೊಂದೆರಡು ಶಾಲೆಗಳಲ್ಲಿ ಕನ್ನಡ ಮಾಧ್ಯಮಕ್ಕೆ ಅವಕಾಶ ಇದೆ. ಆದರೆ ಅಲ್ಲಿನ ಸ್ಥಿತಿ– ಗತಿ ದೇವರಿಗೆ ಪ್ರೀತಿ!

ಕನ್ನಡದಲ್ಲಿ ಕಲಿಯುವವರನ್ನು ಹೀನಾಯವಾಗಿ ಕಾಣುತ್ತಾರೆ. 'ಅಯ್ಯೋ' ಪಾಪ! ಎನ್ನುವಂತೆ ನೋಡುತ್ತಾರೆ. ಭವಿಷ್ಯ ಹೇಗೆ ಮಗುವಿಗೆ!? ಎನ್ನುತ್ತಾರೆ.

-ರಾಯಲಪಾಡು ರಾಘವೇಂದ್ರರಾವ್, ಕೋಲಾರ

### ಕನ್ನಡಕ್ಕೂ ಅವಕಾಶ ಇವೆ

'ಕನ್ನಡ ಮಾಧ್ಯಮದಲ್ಲಿ ಕಲಿತವರಿಗಿಂತ ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತವರಿಗೆ ಹೆಚ್ಚು ಅವಕಾಶಗಳು ಸಿಗುತ್ತಿವೆ' ಎಂದು ಸುರೇಶ್ ಬರೆದಿದ್ದಾರೆ. ಇದು ಸುಳ್ಳು. ಕನ್ನಡ ಮಾಧ್ಯಮದಲ್ಲಿ ಕಲಿತವರಿಗೂ ಕೂಡ ಹೆಚ್ಚು ಅವಕಾಶಗಳು ಸಿಗುತ್ತಿವೆ. ಆದರೆ ಅದನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡಲಾಗುತ್ತಿದೆ. ಬೆಂಗಳೂರಲ್ಲಿ ಉದ್ಯೋಗಿಯಾಗಿರುವ ಬಹುತೇಕರು ಹಳ್ಳಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತವರೇ ಆಗಿದ್ದಾರೆ.

'ಮಾತೃ ಭಾಷೆಯಲ್ಲಿ ಕಲಿಸಬೇಕು ಎಂದು ವಾದ ಮಾಡುವ ಕೆಲವು ಸಾಹಿತಿಗಳು ತಮ್ಮ ಮಕ್ಕಳು ಮೊಮ್ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗೆ ಸೇರಿಸುತ್ತಾರೆ' ಎಂದಿದ್ದೀರಿ. ಹಾಗಂತ ಆ ಸಾಹಿತಿಯ ಮಾತೃಭಾಷಾ ಶಿಕ್ಷಣದ ಹೋರಾಟವನ್ನು ಪ್ರಶ್ನಿಸುವುದು ಉದ್ಧಟತನವಲ್ಲವೆ?

-ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

## ಸುಂದರ ಯುಗಾದಿ ವಿಶೇಷಾಂಕ




ಜಯನಾಮ ಸಂವತ್ಸರದ ಯುಗಾದಿಗೆ 12 ದಿನಗಳ ಮುಂಚೆಯೇ ನಮ್ಮ ಕೈಸೇರಿದ 'ಸುಧಾ ಯುಗಾದಿ ವಿಶೇಷಾಂಕ' ಈ ಬಾರಿಯೂ ಬೇವಿಗಿಂತ ಬೆಲ್ಲವನ್ನು ಜಾಸ್ತಿ ನೀಡಿ, ಸರ್ವಾಂಗ ಸುಂದರವಾಗಿ, ಸಕ್ಕರೆಯ ಬೊಂಬೆಯಂತೆ ಎತ್ತ ರುಚಿ ನೋಡಿದರೂ ಸಿಹಿಯೇ ಆಗಿದೆ. ಇಡೀ ಸಂಚಿಕೆಯನ್ನು ತೂಕವಾಗಿ ಸಿದ್ಧಪಡಿಸಿರುವ ಸಿಬ್ಬಂದಿಗೆ ಓದುಗರ ಪರವಾಗಿ ಅಭಿನಂದನೆಗಳು ಸಲ್ಲಲೇಬೇಕು. ಕೈ ಸೇರಿದೊಡನೆಯೇ ಹಿತಕರವಾದ ಅನುಭವ. ವಿಶೇಷಾಂಕದ ಹಲವಾರು ಲೇಖನಗಳು ಮತ್ತೆ ಮತ್ತೆ ಓದಿಸಿಕೊಂಡು ಹೋಗುವಂತೆ ಮಾಡಿವೆ.

'ಲಂಕೆಯಲ್ಲೊಂದು ರಾಮಾಯಣ ವಿಹಾರ' ವಿಶ್ವನಾಥರ ಲೇಖನ ರಾಮಾಯಣವೂ ಶ್ರೀಲಂಕಾಕ್ಕೆ ಆದಾಯ ತರುತ್ತಿರುವ ಬಗೆಗೆ ಅಚ್ಚರಿ ಮೂಡಿಸಿದೆ. ಮನೋಹರರ 'ಚಿತ್ರಸಂಗೀತ ನಿಂತ ನೀರಲ್ಲ' ಲೇಖನ ಹಲವು ಮಾಹಿತಿಗಳನ್ನು ನೀಡುವುದರ ಜೊತೆಗೆ ಹಳೆಯ ಅಪರೂಪದ ಚಿತ್ರಗಳನ್ನು ನಮ್ಮ ಸಂಗ್ರಹಕ್ಕೆ ಸೇರಿಸುವಂತೆ ಮಾಡಿದೆ. ಗುಡಿಹಳ್ಳಿ ನಾಗರಾಜರ 'ಬಜಾರಿ ಅತ್ತೆಯರು' ಕಿರುತೆರೆಯಲ್ಲಿ ಮಿಂಚುತ್ತಿರುವ ನಮ್ಮ ಪ್ರತಿಭೆಗಳ ಪ್ರತಿಭೆಗಳನ್ನು ಅನಾವರಣಗೊಳಿಸಿದೆ.

ಸಿನಿಮಾಗಳ ಬಗೆಗೆ ಓದುಗರ ಅಂಕಣ ನಮ್ಮನ್ನು ಯಾವುದೋ ಲೋಕಕ್ಕೆ ಕರೆದೊಯ್ಯಿತು.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಸುಂದರ ಮುಖಪುಟ

ಸುಂದರ ಮುಖಪುಟದೊಂದಿಗೆ ಆಗಮಿಸಿದ 'ಸುಧಾ ಸುವರ್ಣ ಸಂಭ್ರಮ–ಯುಗಾದಿ ವಿಶೇಷಾಂಕ' ಆಕರ್ಷಕವಾಗಿದೆ. ಮಹಿಳೆಯರಿಗೆ ಸ್ಫೂರ್ತಿಯಾಗಿ ನಾಲ್ವರು ಸಾಧಕಿಯರ ಪರಿಚಯ ಮಾಡಿಕೊಟ್ಟದ್ದಕ್ಕೆ ಅಭಿನಂದನೆಗಳು. 'ಮಕ್ಕಳ ಮೈದಾನ'ದ ಕಥೆ– ಕವನಗಳು ಚೆನ್ನಾಗಿವೆ. ಆದರೆ ಅತಿ ಉತ್ಸಾಹದಿಂದ ಕಾಯುತ್ತಿದ್ದ ನಗೆ ಬರಹಗಳು ನಿರಾಸೆ ತರಿಸಿದವು. ತೀರ್ಪುಗಾರರು ಇನ್ನೂ ಉತ್ತಮ ಹಾಸ್ಯ ಲೇಖನಗಳನ್ನು ಆಯ್ಕೆ ಮಾಡಬಹುದಿತ್ತೇನೋ ಎನಿಸಿತು.

-ಸ್ಮಿತಾ, ಶಿವಮೊಗ್ಗ

### ಸಂಗ್ರಹಯೋಗ್ಯ ಉಚಿತ ಕೊಡುಗೆ

'ಸುಧಾ' ಯುಗಾದಿ ವಿಶೇಷಾಂಕ 2014 ಸಮೃದ್ಧವಾಗಿತ್ತು. ಚಿಂತನಾರ್ಹ ಲೇಖನಗಳು, ಮಹಿಳೆಯರ ಸಾಧನೆಗಳು, ನಗೆ ಉಕ್ಕಿಸುವ ಹಾಸ್ಯ ಲೇಖನಗಳು, ಮನಮೋಹಕ ಬ್ಲೋ ಅಪ್‌ಗಳು, ಹೊಸ ಕಥೆ, ಚಿಣ್ಣರ ಕಥೆ, ಪದ್ಯಗಳು ಆಕರ್ಷಿಸಿದವು. 'ಆಹಾರದಲ್ಲಿ ಆರೋಗ್ಯ' ಉಚಿತ ಕೊಡುಗೆ ಸಂಗ್ರಹಯೋಗ್ಯವೆನಿಸಿತು.

-ರಾಜಶೇಖರಗೌಡ, ಕೊಟ್ಟೂರು

### ಸಂಗೀತ ನಿಂತ ನೀರಲ್ಲ

'ಸುಧಾ' ಯುಗಾದಿ ಸಂಚಿಕೆಯಲ್ಲಿ ವಿ. ಮನೋಹರ್ ತಮ್ಮ ಲೇಖನದಲ್ಲಿ, ಇಂದಿನ ಸಿನಿಮಾ ಸಂಗೀತವನ್ನು, ಬದಲಾವಣೆಯ ಕಾರಣ ಕೊಟ್ಟು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಹೌದು, ಅಂದಮಾತ್ರಕ್ಕೆ ಹಠದಿಂದ ಎಲ್ಲವನ್ನೂ ಬದಲಿಸಬೇಕಿಲ್ಲ. ಹಾಗೂ ಬದಲಾವಣೆ ತಂದರೆ, ಅದು ಮೇಲ್ಮಟ್ಟಕ್ಕೆ ಹೋಗಬೇಕೇ ಹೊರತು ಇರುವ ಮಟ್ಟದಿಂದ ಕೆಳಗಿಳಿಯಬಾರದು.

-ಶ್ರೀನಾಥ್ ಕೊನೇಟಿ, ಬೆಂಗಳೂರು